**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001.**

ಸಂಖ್ಯೆ:ಸಿ7[2]ಪ್ರಾಶಿಅ:ಸಿ.ಬಿ.ಎಸ್.ಇ–ಬೈಲಾ:10:2018–19 ದಿನಾಂಕ:11ನೇ ಜನವರಿ 2019

## : ಸು ತ್ತೋ ಲೆ :

**ವಿಷಯ:** ಸಿ.ಬಿ.ಎಸ್.ಇ ಪರಿಷ್ಕೃತ ಬೈಲಾ ನಿಯಮಗಳನ್ವಯ ಸಿ.ಬಿ.ಎಸ್.ಇ ಪಠ್ಯ –ಕ್ರಮ ಸಂಯೋಜನೆ ಪಡೆಯಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ.

**ಉಲ್ಲೇಖ:** ಸಿ.ಬಿ.ಎಸ್.ಇ ಮಂಡಳಿ ಅಧ್ಯಕ್ಷರು, ನವದೆಹಲಿ, ಇವರ ಪತ್ರ ಸಂಖ್ಯೆ: DO:CBSE:CM:AFF:R-BL:2018/420956, ದಿ:05.09.2018.

2] ಸರ್ಕಾರದ ಪತ್ರ ಸಂಖ್ಯೆ:ಇಡಿ:613:ಪಿ.ಜಿ.ಸಿ:2018, ದಿನಾಂಕ:03.11.2018.

3] ಸರ್ಕಾರದ ಪತ್ರ ಸಂಖ್ಯೆ:ಇಡಿ:587:ಪಿಜಿಸಿ:2018, ದಿನಾಂಕ:19.11.2018.

4] ಸಿ.ಬಿ.ಎಸ್.ಇ ಪರಿಷ್ಕೃತ ಬೈಲಾ ನಿಯಮಗಳು.

ಂಂಂ ಂಂಂ ಂಂಂ

ಆರ್.ಟಿ.ಇ ಕಾಯ್ದೆ ಸೆಕ್ಷನ್–18ನ್ವಯ ಕೇಂದ್ರ ಪಠ್ಯಕ್ರಮ ಸಂಯೋಜನೆಗಾಗಿ ಪ್ರಸ್ತುತ ಚಾಲ್ತಿಯಲ್ಲಿದ್ದ ಬೈಲಾ ನಿಯಮಗಳನ್ನು ಪರಿಷ್ಕರಿಸಲಾಗಿದೆ. ಸಿ.ಬಿ.ಎಸ್.ಇ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಬಯಸುವ ಶಾಲೆಗಳು ಉಲ್ಲೇಖ [4]ರ ಪರಿಷ್ಕೃತ ಬೈಲಾ ನಿಯಮಗಳನ್ವಯ ಅರ್ಜಿಗಳನ್ನು ರಾಜ್ಯ ಮತ್ತು ಜಿಲ್ಲಾ ಶಿಕ್ಷಣ ಆಡಳಿತ ವ್ಯವಸ್ಥೆ ಮೂಲಕ ಅರ್ಜಿಗಳನ್ನು ಅಂತರ್ಜಾಲದಲ್ಲಿ ನಿಗದಿತ ನಮೂನೆಯಂತೆ ಅರ್ಜಿ ಸಲ್ಲಿಸಬೇಕಿದೆ. ಈ ಸಂಬಂಧ ಪರಿಷ್ಕೃತ ಬೈಲಾ ನಿಯಮಗಳನ್ವಯ ಕೆಳಕಂಡ ದಾಖಲೆಗಳನ್ನು ಹಾಗೂ ಕ್ರಮಗಳನ್ನು ಅನುಸರಿಸತಕ್ಕದ್ದು. ಹಾಗೂ ತಮ್ಮ ವ್ಯಾಪ್ತಿಯ ಆಡಳಿತ ಮಂಡಳಿಗಳಿಗೆ ಈ ಮಾಹಿತಿಯನ್ನು ನೀಡಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳುವುದು. ರಾಜ್ಯದಲ್ಲಿ ಸಿ.ಬಿ.ಎಸ್.ಇ ಪಠ್ಯಕ್ರಮ ಸಂಯೋಜನೆ ಪಡೆದಿರುವ ಶಾಲೆಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸಿ.ಬಿ.ಎಸ್.ಇ ಸಂಯೋಜನೆ ಹಾಗೂ ಸಂಯೋಜನೆ ವಿಸ್ತರಣೆಗಾಗಿ ಆನ್‌ಲೈನ್ ಮೂಲಕ ಸಂಸ್ಥೆಗಳಿಂದ ಬಂದ ಅರ್ಜಿ / ದಾಖಲೆಗಳನ್ನು ಜಿಲ್ಲಾ ಉಪನಿರ್ದೇಶಕರು ಮತ್ತು ಜಿಲ್ಲಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಬೇಕಿರುತ್ತದೆ.

ವೆಬ್‌ಸೈಟ್ ಅಡ್ರೆಸ್ – http://cbseaff.nic.in/cbse_aff/schdir_Report/userview.aspx

### I. ತಾತ್ಕಾಲಿಕ ಸಂಯೋಜನೆಯನ್ನು ಪಡೆಯಲು ನಿಗದಿಪಡಿಸಿರುವ ನಿಬಂಧನೆಗಳು:

#### A. ಅರ್ಜಿಸಲ್ಲಿಸುವ ವಿಧಾನ:

*01.* ರಾಜ್ಯ ಸರ್ಕಾರದ ವತಿಯಿಂದ ನಿರಾಕ್ಷೇಪಣಾ ಪತ್ರ ಪಡೆಯತಕ್ಕದ್ದು.

*02.* ಸಂಯೋಜನೆಗೆ ಅರ್ಜಿ ಸಲ್ಲಿಸುವ ಶಾಲೆಗಳು ಕಡ್ಡಾಯವಾಗಿ 6ನೇ ತರಗತಿಯನ್ನು ಹೊಂದಿರತಕ್ಕದ್ದು ಮತ್ತು ಸದರಿ ತರಗತಿಯ ವಿದ್ಯಾರ್ಥಿಗಳು 9ನೇ ತರಗತಿಗೆ ದಾಖಲಾಗುವ ವೇಳೆಗೆ ಅಂದರೆ, ಮೂರು ವರ್ಷಗಳ ಅವಧಿಗೆ ಸಂಯೋಜನೆ ಪಡೆಯತಕ್ಕದ್ದು.

*03.* ಮಂಡಳಿಯ ಸಂಯೋಜನೆಯನ್ನು ಅಂಗೀಕರಿಸಿ, ಲಿಖಿತ ಪ್ರಮಾಣ ಪತ್ರವನ್ನು ವಿತರಿಸುವವರೆವಿಗೂ ಯಾವುದೇ ಮಕ್ಕಳನ್ನು 9ನೇ ತರಗತಿ ಸಿ.ಬಿ.ಎಸ್.ಇ ಪಠ್ಯಕ್ರಮಕ್ಕೆ ಉತ್ತೀರ್ಣಗೊಳಿಸುವಂತಿಲ್ಲ. ಹಾಗೂ ಮಂಡಳಿಯಿಂದ ಸಂಯೋಜನೆ ಹೊಂದದ ಶಾಲೆಗಳವರು ಅಭ್ಯರ್ಥಿಗಳನ್ನು ಮಂಡಳಿಯ ಪರೀಕ್ಷೆಗಳಿಗೆ ನೋಂದಾಯಿಸುವಂತಿಲ್ಲ.

*04.* ಎನ್.ಒ.ಸಿ.ಯನ್ನು ಪಡೆದ ಮಾತ್ರಕ್ಕೆ ಸಂಯೋಜನೆಯನ್ನು ಪಡೆದಿರುವುದಾಗಿ ಭಾವಿಸತಕ್ಕದ್ದಲ್ಲ.

*05.* ಅರ್ಜಿ ಸಲ್ಲಿಸಲು ಜನವರಿ–1 ರಿಂದ ಜೂನ್–30ರವರೆಗೆ ಅವಕಾಶ ಕಲ್ಪಿಸಿದೆ.

**B. ಸಕ್ಷಮ ಪ್ರಾಧಿಕಾರದಿಂದ ನೋಂದಾಯಿಸಲ್ಪಟ್ಟ ಟ್ರಸ್ಟ್ / ಕಂಪನಿ / ಸೊಸೈಟಿಗಳ ಅರ್ಹತೆ ಕುರಿತು:**

*01.* ಭಾರತೀಯ ಕಂಪನಿಗಳ ಕಾಯ್ದೆ–1956ರ ಸೆಕ್ಷನ್–25[1][ಎ]ರನ್ವಯ ಅಥವಾ ತಿದ್ದುಪಡಿ ನಿಯಮಗಳನ್ವಯ ಶೈಕ್ಷಣಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ನೋಂದಾಯಿಸಲ್ಪಟ್ಟ ಟ್ರಸ್ಟ್ / ಕಂಪನಿ / ಸೊಸೈಟಿಯಾಗಿರತಕ್ಕದ್ದು. ಯಾವುದೇ ಲಾಭದಾಯಕ ಉದ್ದೇಶಗಳಿಗಾಗಿ ನಡೆಸತಕ್ಕದ್ದಲ್ಲ.

*02.* ಶಾಲೆಯು ಸಕ್ರಮ ಆಡಳಿತ ವರ್ಗವನ್ನು ಹೊಂದಿರತಕ್ಕದ್ದು. ಮತ್ತು ನಿಯಮಾನುಸಾರ ಲೆಕ್ಕ ಪರಿಶೋಧನಾ ದಾಖಲೆಗಳನ್ನು ನಿರ್ವಹಿಸಿ ಅವಶ್ಯವಿದ್ದಾಗ ದಾಖಲೆಗಳನ್ನು ಸಲ್ಲಿಸತಕ್ಕದ್ದು.

*03.* ಆಡಳಿತ ಮಂಡಳಿಯಲ್ಲಿ ಬದಲಾವಣೆಗಳೇನಾದರೂ ಇದ್ದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ ಒದಗಿಸತಕ್ಕದ್ದು.

**C. ಬೋಧನಾ ಮಾಧ್ಯಮದ ಕುರಿತು.**

*01.* ಶಾಲೆಯು ಕಡ್ಡಾಯವಾಗಿ ಆಂಗ್ಲ ಮಾಧ್ಯಮದಲ್ಲಿ ಮತ್ತು ಮಂಡಳಿಯು ನಿಗದಿಪಡಿಸಿರುವ ಪಠ್ಯಕ್ರಮದಂತೆ ಬೋಧಿಸುತ್ತಿರಬೇಕು. ಈ ಸಂಬಂಧ ಅಗತ್ಯ ಸಂಪನ್ಮೂಲಗಳನ್ನು ಹೊಂದಿರತಕ್ಕದ್ದು.

**D. ಅಗತ್ಯ ವಿಸ್ತೀರ್ಣದ ಭೂಮಿ / ಸ್ಥಳಾವಕಾಶದ ಕುರಿತು.**

*01.* ಶಾಲೆಯು ಮಕ್ಕಳ ಸಂಖ್ಯೆ ಮತ್ತು ಲಿಂಗಾನುಪಾತಕ್ಕೆ ತಕ್ಕಂತೆ ಅಗತ್ಯ ವಿಸ್ತೀರ್ಣದ ಪರಿವರ್ತಿತ ಭೂಮಿ ಮತ್ತು ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.

*02.* ಶೈಕ್ಷಣಿಕ ಉದ್ದೇಶಗಳಿಗಾಗಿ ಪರಿವರ್ತನೆಗೊಂಡು ಸಕ್ಷಮ ಪ್ರಾಧಿಕಾರದಿಂದ ನೋಂದಾಯಿಸಲ್ಪಟ್ಟ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ 1 ಎಕರೆ ಹಾಗೂ ಇತರೆ ಪ್ರದೇಶಗಳಲ್ಲಿ 2 ಎಕರೆ ವಿಸ್ತೀರ್ಣಕ್ಕಿಂತ ಕಡಿಮೆ ಇಲ್ಲದ ಜಮೀನು ಹೊಂದಿರತಕ್ಕದ್ದು.

*03.* ಪ್ರತಿ ತರಗತಿ ವಿಭಾಗಗಳಲ್ಲಿ 40ಕ್ಕಿಂತ ಅಧಿಕ ವಿದ್ಯಾರ್ಥಿಗಳನ್ನು ಹೊಂದಿರಬಾರದು.

**E. ಶಿಕ್ಷಕರ / ಸಿಬ್ಬಂದಿಗಳ ಕುರಿತು.**

*01.* ಎನ್.ಸಿ.ಇ.ಆರ್.ಟಿ ನಿಯಮಗಳನ್ವಯ ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ವಿಷಯವಾರು ಶಿಕ್ಷಕರನ್ನು ನೇಮಿಸಿಕೊಂಡಿರಬೇಕು. ಈ ಸಂಬಂಧ ಆಡಳಿತ ಮಂಡಳಿಯಿಂದ ನೇಮಕಾತಿ ಆದೇಶ ಪಡೆದಿರಬೇಕು.

*02.* ನೇಮಕವಾದ ಶಿಕ್ಷಕರಿಗೆ / ಸಿಬ್ಬಂದಿಗಳಿಗೆ ಸೇವಾ ಭದ್ರತೆ ಒದಗಿಸಿರಬೇಕು ಮತ್ತು ಕನಿಷ್ಠ ವೇತನ ನಿಗದಿಪಡಿಸಿ ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿಸುತ್ತಿರಬೇಕು.

*03.* ಸೇವಾ ವಹಿಗಳನ್ನು ನಿರ್ವಹಿಸಿರಬೇಕು.

*04.* ಶಿಕ್ಷಕರ / ಸಿಬ್ಬಂದಿಗಳ ಚರಿತ್ರೆ ಉತ್ತಮವಾಗಿರಬೇಕು. ಯಾವುದೇ ಸಿವಿಲ್ / ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸಿರಬಾರದು.

**F. ಮಕ್ಕಳ ಸುರಕ್ಷತೆ. *[Manual on Safety and Security of Children in Schools developed by NCPCR]***

*01.* ಮಕ್ಕಳ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು.

*02.* ತರಗತಿಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿರಬೇಕು.

*03.* ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಅಗತ್ಯ ಸಲಕರಣೆಗಳನ್ನು ಹೊಂದಿರಬೇಕು. ಮತ್ತು ಸದರಿ ಉಪಕರಣಗಳ ಬಳಕೆ ಮಾಡುವ ಬಗ್ಗೆ ಅಗತ್ಯ ತರಬೇತಿಗಳನ್ನು ತಜ್ಞರಿಂದ ಸಿಬ್ಬಂದಿಗಳಿಗೆ ನೀಡತಕ್ಕದ್ದು.

**G. ಶಾಲಾ ಕಟ್ಟಡದ ಕುರಿತು. [National Building Code]**

*[ಸರ್ಕಾರದ ಪತ್ರ ಸಂಖ್ಯೆ:ಇಡಿ:587:ಪಿ.ಜಿ.ಸಿ:2018, ದಿನಾಂಕ:19.01.2018]*

*01.* ಶಾಲಾ ಕಟ್ಟಡದ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

*02.* ಶಾಲಾ ಕಟ್ಟಡವನ್ನು ಭಾರತೀಯ ಕಟ್ಟಡ ಸಂಹಿತೆ–1966ರನ್ವಯ ನಿರ್ಮಿಸಿರಬೇಕು.

*03.* ಶಾಲಾ ಕಟ್ಟಡವು ಹಾನಿಕಾರಕ / ವಿಷಕಾರಕ ಮತ್ತು ಮಲಿನಯುಕ್ತ ಪದಾರ್ಥಗಳಿಂದ ಮುಕ್ತವಾಗಿರಬೇಕು.

*04.* ಕಟ್ಟಡವು ಆಧುನಿಕ ತಂತ್ರಜ್ಞಾನದಂತೆ ನಿರ್ಮಿಸಿ, ಭೂಕಂಪನ ಇತ್ಯಾದಿ ಪ್ರಕೃತಿ ವಿಕೋಪಗಳನ್ನು ತಡೆಯುವಂತಿರಬೇಕು.

**H. ಶಾಲೆಯ ಕುರಿತು.**

*01.* ಶಾಲೆಯು ನಿಗದಿತ ಬ್ಯಾಂಕ್ ಠೇವಣಿ ಇಟ್ಟಿರತಕ್ಕದ್ದು.

*02.* ಶಾಲೆಯು ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು.

*03.* ಶಾಲೆಯು "Doctor on call" ವ್ಯವಸ್ಥೆಯನ್ವಯ ಒಬ್ಬ ನುರಿತ ವೈದ್ಯರನ್ನು ತುರ್ತು ಪರಿಸ್ಥಿತಿಗಳಲ್ಲಿ ಸಕಾಲದಲ್ಲಿ ಲಭ್ಯವಿರುವ ವ್ಯವಸ್ಥೆಯನ್ನು ಕಲ್ಪಿಸಿರಬೇಕು.

*04.* ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಅಗತ್ಯ ಆಟದ ಮೈದಾನ, ಶೌಚಾಲಯ, ತರಗತಿ, ಪೀಠೋಪಕರಣ, ಪಠ್ಯೇತರ ಚಟುವಟಿಕೆಗಳಿಗೆ ಅಗತ್ಯ ಸ್ಥಳಾವಕಾಶ ಹೊಂದಿರಬೇಕು.

*05.* ಪ್ರತಿ ಮಹಡಿಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶಾಲಾ ಗಂಟೆಯ ವ್ಯವಸ್ಥೆ ಹೊಂದಿರಬೇಕು.

ಅರ್ಜಿ, ಪರಿಶೀಲನೆ ಮಾಡಬೇಕಾದ ಮಾಹಿತಿಯ ಚೆಕ್‌ಲಿಸ್ಟ್ ಮತ್ತು ಇತರೆ ವಿವರಗಳಿಗಾಗಿ ಸಿ.ಬಿ.ಎಸ್.ಇ ಮಂಡಳಿಯ http://cbseaff.nic.in ವೆಬ್‌ಸೈಟನ್ನು ಸಂಪರ್ಕಿಸುವುದು.

*[ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]*

*[ಎಸ್.ಜಯಕುಮಾರ್]*
ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

***ಇವರಿಗೆ:***

*01.* ರಾಜ್ಯದ ಎಲ್ಲಾ ಗೌರವಾನ್ವಿತ ಜಿಲ್ಲಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ ಹಾಗೂ ಅವಗಾಹನೆಗಾಗಿ ಸಲ್ಲಿಸಿದೆ.

*02.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.

*03.* ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.

*04.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.

***ಪ್ರತಿಯನ್ನು:***

*05.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.

*06.* ಕಛೇರಿ ಪ್ರತಿ.